Unsubscribe / Change Profile
Click here to view this email in your browser

**Sydney Kannada Sangha Inc**
PO Box 4035, Strathfield South, NSW - 2136, Australia
Email: sks-sydney@kannada.org.au Website: http://www.kannada.org.au
Incorporation No: INC 9877716 ABN No. 78136915938
Serving the community since 1983

## ವಾರ್ತಾ ಪತ್ರ- ನವೆಂಬರ್ ೨೦೧೭

## Newsletter November 2017

ಸಿಡ್ನಿಯ ಕನ್ನಡ ಭಾಂದವರಿಗೆಲ್ಲ ೬೦ನೇ "ಕರ್ನಾಟಕ ರಾಜ್ಯೋತ್ಸವ" ದ ಹಾರ್ಧಿಕ ಶುಭಾಶಯಗಳು.

ನಮ್ಮ ತಾಯ್ನಾಡು ಭಾರತಕ್ಕೆ ಬ್ರಿಟೀಷರಿಂದ ೧೯೪೭ರಲ್ಲಿ ಸ್ವಾತಂತ್ರ್ಯ ಸಿಕ್ಕ ನಂತರ ಸ್ವತಂತ್ರ ಭಾರತದ ಪ್ರಪ್ರಥಮ ಗೃಹ ಮಂತ್ರಿಗಳಾದ ಉಕ್ಕಿನ ಮನುಷ್ಯ ದಿ. ವಲ್ಲಭಭಾಯಿ ಪಟೇಲರ ಪರಿಶ್ರಮದ ಫಲವಾಗಿ ಹಲವಾರು ಸಾಮಂತ ರಾಜರುಗಳು ಮತ್ತು ಸುಲ್ತಾನರುಗಳ ಆಡಳಿತವನ್ನು ಕೊನೆಗೊಳಿಸಿ ಅಖಂಡ ಭಾರತ ದೇಶ ಏಕೀಕರಣಗೊಂಡಿತು.



೧೯೫೬ರಲ್ಲಿ ಭಾಷಾವಾರು ರಾಜ್ಯಗಳ ವಿಂಗಡನೆಯಾದಾಗ ಕನ್ನಡ ಭಾಷಿಕರ ರಾಜ್ಯವೊಂದನ್ನು ರಚಿಸಲಾಯಿತು. ಹರಿದು ಹಂಚಿ ಹೋಗಿದ್ದ ಹಳೆಯ ಮೈಸೂರು ರಾಜ್ಯ, ಹೈದರಾಬಾದ್ ಕರ್ನಾಟಕ, ಕೊಡಗು ರಾಜ್ಯ, ಮದ್ರಾಸ್ ರಾಜ್ಯದ ಕೆಲ ಭಾಗಗಳು ಮತ್ತು ಮುಂಬೈ ಕರ್ನಾಟಕದ ಭಾಗಗಳನ್ನು ಒಳಗೊಂಡ ಮೈಸೂರು ರಾಜ್ಯವು ೧೯೫೬ರ ನವೆಂಬರ್ ೧ನೇ ದಿನಾಂಕದಂದು ಅಸ್ತಿತ್ವಕ್ಕೆ ಬಂದಿತು.

ಏಕೀಕರಣಗೊಂಡ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಗಳು ದಿ. ಎಸ್. ನಿಜಲಿಂಗಪ್ಪ ಮತ್ತು ಪ್ರಥಮ ರಾಜ್ಯಪಾಲರು ದಿ. ಜಯಚಾಮರಾಜೇಂದ್ರ ಒಡೆಯರ್ ಅವರು.

೧೯೭೧ರಲ್ಲಿ ರಾಜ್ಯದ ಹೆಸರನ್ನು ಕರ್ನಾಟಕವೆಂದು ಬದಲಿಸುವ ಬಗ್ಗೆ ಚರ್ಚೆ ಆರಂಭವಾಗಿ ೧೯೭೩ರಲ್ಲಿ ಅಂದಿನ ಮುಖ್ಯಮಂತ್ರಿ ದಿ. ಡಿ. ದೇವರಾಜ ಅರಸ್ ಅವರ ಮುಂದಾಳತ್ವದಲ್ಲಿ ಕನ್ನಡಿಗರು ನೆಲೆಸಿರುವ ನಾಡು ಕರುನಾಡು "ಕರ್ನಾಟಕ"ವೆಂದು ನವೆಂಬರ್ ೧ನೇ ತಾರೀಖಿನಂದು ಮರುನಾಮಕರಣಗೊಂಡಿತು.

ಮೈಸೂರು/ಕರ್ನಾಟಕ ರಾಜ್ಯದ ನಿರ್ಮಾಣದ ಹಿಂದೆ ಒಂದು ಬಹು ದೊಡ್ಡ ಇತಿಹಾಸವೇ ಇದೆ. ಕನ್ನಡಿಗರ ಇಚ್ಛೆಯಂತೆ ರಾಜ್ಯವೊಂದು ಅಸ್ತಿತ್ವಕ್ಕೆ ಬಂದರೂ ಇನ್ನು ಹಲವು ಕನ್ನಡ ಭಾಷಿಕರ ಪ್ರದೇಶಗಳು ನೆರೆಯ ರಾಜ್ಯಗಳಲ್ಲಿ ಉಳಿದು ಹೋಗಿವೆ. ಮಹಾರಾಷ್ಟ್ರದ ಸೋಲಾಪುರ, ಮೀರಜ್, ಅಕ್ಕಲಕೋಟ್ ಮತ್ತು ಕೇರಳದ ಕಾಸರಗೋಡ್ ಮುಂತಾದ ಪ್ರದೇಶಗಳು ಹೊರಗುಳಿದಿವೆ.

ಮೊದಲಿನ ಮೈಸೂರು ಮತ್ತು ಇಂದಿನ ಕರ್ನಾಟಕ ರಾಜ್ಯವು ಉದಯವಾದ ದಿನವನ್ನು ಪ್ರತೀ ವರ್ಷ ರಾಜ್ಯೋತ್ಸವ ದಿನವನ್ನಾಗಿ ಅಧ್ದೂರಿಯಿಂದ ಆಚರಿಸುವದು ಕನ್ನಡಿಗರ ಹೆಗ್ಗಳಿಕೆಯಾಗಿದೆ.

ಈ ವರ್ಷ ನಮ್ಮ ಕರ್ನಾಟಕ ರಾಜ್ಯವು ೬೧ ವರ್ಷಗಳನ್ನು ಪೂರೈಸಿ ೬೨ನೇ ವರ್ಷಕ್ಕೆ ಕಾಲಿಟ್ಟಿದೆ.

ಬನ್ನಿ ನಾವೆಲ್ಲ ಒಂದಾಗಿ ರಾಜ್ಯೋತ್ಸವವನ್ನು ಸಿಡ್ನಿ ಕನ್ನಡ ಸಂಘದ ಆಶ್ರಯದಲ್ಲಿ ಇದೇ ನವೆಂಬರ್ ೪ ರಂದು ಶನಿವಾರ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸೋಣ.

## ೧. ಕರ್ನಾಟಕ ರಾಜ್ಯೋತ್ಸವ ೨೦೧೭

**ದಿನಾಂಕ:** ಶನಿವಾರ, ೪ ನವೆಂಬರ್ ೨೦೧೭

**ಸ್ಥಳ:** ದಂಡಾಸ್ ಸಮುದಾಯ ಭವನ, ೨೧ ಸ್ಟುರ್ಟ್ ರಸ್ತೆ, ಟೆಲೋಪಿಯಾ ೨೧೧೭

**ವೇಳೆ:** ಸಂಜೆ ೫.೦೦ ಘಂಟೆಯಿಂದ

ಕನ್ನಡದ ಪ್ರಖ್ಯಾತ  ಸಾಹಿತಿ, ಕವಿ ಮತ್ತು ಜನಪ್ರೀಯ ಕನ್ನಡ ಚಲನಚಿತ್ರ ಗೀತಕಾರ ಶ್ರೀ: ಜಯಂತ್ ಕಾಯ್ಕಿಣಿ ಅವರು ತಮ್ಮ ಪತ್ನಿ ಶ್ರೀಮತಿ: ಸ್ಮಿತಾ ಅವರೊಂದಿಗೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

**ಕಾರ್ಯಕ್ರಮ:**

- ಸಂಜೆ ೫.೦೦ ರಿಂದ ೬.೦೦ ರ ವರೆಗೆ ವೈದ್ಯರಿಂದ ರಕ್ತದ ಒತ್ತಡ ಮತ್ತು ರಕ್ತದಲ್ಲಿನ ಸಕ್ಕರೆ ಪ್ರಮಾಣದ ಪರೀಕ್ಷೆ.
- ೬.೦೦ ರಿಂದ ಸ್ಥಳೀಯ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು.

**ಕಾರ್ಯಕ್ರಮ:**

- ಸಂಜೆ ೫.೦೦ ರಿಂದ ೬.೦೦ ರ ವರೆಗೆ ವೈದ್ಯರಿಂದ ರಕ್ತದ ಒತ್ತಡ ಮತ್ತು ರಕ್ತದಲ್ಲಿನ ಸಕ್ಕರೆ ಪ್ರಮಾಣದ ಪರೀಕ್ಷೆ.
- ೬.೦೦ ರಿಂದ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು.
  ಗಾಯನ, ನೃತ್ಯ, "ಶ್ರೀಕೃಷ್ಣ ಸಂಧಾನ" ಹಾಸ್ಯ ನಾಟಕ ಮತ್ತು ಫ್ಯಾಶನ್ ಪರೇಡ್.

**ವಿಶೇಷ ಕಾರ್ಯಕ್ರಮ:** ಸ್ಥಳೀಯ ಗಾಯಕ ಗಾಯಕಿಯರಿಂದ ಶ್ರೀ: ಜಯಂತ್ ಕಾಯ್ಕಿಣಿ ವಿರಚಿತ ಕನ್ನಡ ಚಿತ್ರ ಗೀತೆಗಳ ಹಾಡುಗಾರಿಕೆ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನವರನ್ನು ಸಂಪರ್ಕಿಸಬಹುದು:

ಶ್ರೀಮತಿ: ಶಾರದಾ ಕಾರ್ತಿಕ್ – 0401 602 775, ಶ್ರೀಮತಿ: ವೇದಾ ದೇಸಾಯಿ – 0478 665 791
ಶ್ರೀಮತಿ: ಸ್ಮಿತಾ ಕರ್ಕಿ – 0481 003 394 ಶ್ರೀಮತಿ. ನಂದಾ ಶಿರೋಳ್ – 0421 131 057

## ಸಿಡ್ನಿಯಲ್ಲಿ ಕರ್ನಾಟಕ ರಾಜ್ಯೋತ್ಸವದಲ್ಲಿ ಭಾಗವಹಿಸಲು ಶ್ರೀ. ಜಯಂತ್ ಕಾಯ್ಕಿಣಿ ದಂಪತಿಗಳ ಆಗಮನ

ಸಿಡ್ನಿ ಕನ್ನಡ ಸಂಘದ ಆಶ್ರಯದಲ್ಲಿ ಇದೇ ಶನಿವಾರ ನಡೆಯಲಿರುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಕನ್ನಡದ ಹೆಸರಾಂತ ಸಾಹಿತಿ, ಕವಿ ಮತ್ತು ಕನ್ನಡ ಚಲನಚಿತ್ರ ಗೀತಕಾರರು ಆದ ಡಾ. ಜಯಂತ್ ಕಾಯ್ಕಿಣಿಯವರು ತಮ್ಮ ಪತ್ನಿ ಶ್ರೀಮತಿ. ಸ್ಮಿತಾ ಅವರೊಂದಿಗೆ ಸಿಡ್ನಿ ನಗರಕ್ಕೆ ಇಂದು ಆಗಮಿಸಿದರು.

ಸಿಡ್ನಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಡ್ನಿ ಕನ್ನಡ ಸಂಘದ ಪದಾಧಿಕಾರಿಗಳು ಮತ್ತು ಕನ್ನಡ ಸಮುದಾಯದ ಮುಖಂಡರು ಕಾಯ್ಕಿಣಿ ದಂಪತಿಗಳನ್ನು ಆದರದಿಂದ ಬರಮಾಡಿಕೊಂಡರು.





ಸಂಘದ ಅಧ್ಯಕ್ಷರಾದ ಶ್ರೀ. ಓಂಕಾರಸ್ವಾಮಿ ಗೊಪ್ಪೇನಳ್ಳಿ, ಕಾರ್ಯದರ್ಶಿ ಶ್ರೀ. ವಿಜಯಕುಮಾರ ಹಲಗಲಿಯವರು ಜಯಂತ್ ಕಾಯ್ಕಿಣಿಯವರಿಗೆ ಪುಷ್ಪ ಗುಚ್ಛವನ್ನು ಕೊಟ್ಟು ಸ್ವಾಗತ ಕೋರಿದರು. ಸಂಘದ ಕಾರ್ಯಕಾರೀ ಮಂಡಳಿಯ ಸದಸ್ಯರುಗಳಾದ ಶ್ರೀ. ಸ್ಯಾಮ್ ಗೋಪಿನಾಥ್, ಶ್ರೀಮತಿ. ಗೀತಾ ಗೋಪಿನಾಥ್, ಶ್ರೀಮತಿ. ಭಾಗ್ಯಾ ಶಂಕರ್ ಅವರು ಹಾಜರಿದ್ದರು.

ಕನ್ನಡ ಸಂಘದ ಪೋಷಕರು ಮತ್ತು ಸಮುದಾಯದ ಸಕ್ರೀಯ ಸದಸ್ಯರುಗಳಾದ ಶ್ರೀ. ವಿನಾಯಕ್ ಕಲ್ಲಪ್ಪ ಮತ್ತು ಶ್ರೀ. ಗಿರಿ ಭಟ್ ಅವರು ಕೂಡ ಕಾಯ್ಕಿಣಿ ದಂಪತಿಗಳನ್ನು ಸ್ವಾಗತಿಸಿದರು.

**ಸಿಡ್ನಿ ಕನ್ನಡ ಸಂಘ (ನೋಂ)**

***Sydney Kannada Sangha Inc.***

**Disclaimer:** Sydney Kannada Sangha Inc. receives funds from sponsors as sponsorship. Sydney Kannada Sangha is not responsible for any investment/business decisions made by members. Members and public are to make their own research, investigation and take informed decisions. Members should consult their Accountants and/or Financial advisers. Members/Public are solely responsible for their decisions.



Find us on facebook

Click here to view this email in your browser

Unsubscribe / Change Profile

Powered by YMLP.com